ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**679**
ಸದಸ್ಯರ ಹೆಸರು	:	ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	12-03-2020
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಗಳು

***

	ಪ್ರಶ್ನೆ	ಉತ್ತರ
ಅ)	ರೈತರ ಹೊಲದಲ್ಲಿ ಇಲಾಖೆ ವತಿಯಿಂದ ಅಳವಡಿಸಿದ ಟಿ.ಸಿ.ಗಳು ಸುಟ್ಟು ಹೋದಲ್ಲಿ ಎಷ್ಟು ದಿನಗಳೊಳಗಾಗಿ ಅವುಗಳನ್ನು ಇಲಾಖೆಯವರು ಅಳವಡಿಸಬೇಕು; ರೈತರು ಟಿ.ಸಿ. ಸುಟ್ಟ ಬಗ್ಗೆ ಯಾರಿಗೆ ತಿಳಿಸಬೇಕು; ತಿಳಿಸಿದ ಎಷ್ಟು ದಿನಗಳೊಳಗಾಗಿ ಇಲಾಖೆಯವರು ಹೊಸ ಟಿ.ಸಿ. ಅಳವಡಿಸುವರು; ಇಲಾಖೆಯವರೇ ತಮ್ಮ ವಾಹನದಿಂದ ತಂದು ಅಳವಡಿಸುವರೆ ಅಥವಾ ರೈತರೇ ತಮ್ಮ ಟ್ರಾಕ್ಟರ್ ತಂದಾಗ ಮಾತ್ರ ಇಲಾಖೆಯವರು ಟಿ.ಸಿ. ಒದಗಿಸುವರೇ;	ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಅಳವಡಿಸಿರುವ ಪರಿವರ್ತಕಗಳು ವಿಫಲವಾದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿಯಮಾವಳಿಗಳ ಪ್ರಕಾರ 72 ಗಂಟೆಯೊಳಗಾಗಿ ಲಭ್ಯತೆ ಮತ್ತು ಜೇಷ್ಠತೆ ಆಧಾರದ ಮೇಲೆ ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಲಾಗುತ್ತಿದೆ. ಪರಿವರ್ತಕಗಳು ವಿಫಲವಾದಲ್ಲಿ ಸಂಬಂಧಪಟ್ಟ ಶಾಖಾಧಿಕಾರಿ ಅಥವಾ ಉಪ-ವಿಭಾಗಾಧಿಕಾರಿಯವರ ಗಮನಕ್ಕೆ ತರಬಹುದು ಹಾಗೂ ಸಹಾಯವಾಣಿ ಸಂಖ್ಯೆ 1912 ಕ್ಕೆ ತಿಳಿಸಬಹುದು. ವಿಫಲವಾದ ಪರಿವರ್ತಕವನ್ನು ಇಲಾಖೆಯವರೇ ಬದಲಾಯಿಸುತ್ತಿದ್ದಾರೆ.
ಆ)	ಕಾರವಾರ ಜಿಲ್ಲೆಯ ವಿವಿಧ ತಾಲ್ಲೂಕಿನಲ್ಲಿ ಇಲಾಖೆಯವರು ಅಳವಡಿಸಿದ ಟಿ.ಸಿ.ಗಳು ಸುಟ್ಟಾಗ ಇಲಾಖೆಗೆ ತಿಳಿಸಿದರೂ ಇಲಾಖೆಯಲ್ಲಿ ಟಿ.ಸಿ.ಗಳು ಇರುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಉತ್ತರಕನ್ನಡ ಜಿಲ್ಲೆಯಲ್ಲಿ ವಿಫಲವಾದ ಪರಿವರ್ತಕಗಳನ್ನು ನಿಗದಿತ ಅವಧಿಯೊಳಗಾಗಿ ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಈ ಬಗ್ಗೆ ರೈತರು / ಗ್ರಾಹಕರಿಂದ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ.
ಇ)	ಟಿ.ಸಿ. ಅಳವಡಿಸದೇ ಇದ್ದಲ್ಲಿ ರೈತರ ಬೆಳೆಗಳು ನಾಶವಾದಲ್ಲಿ ಇದಕ್ಕೆ ಜವಾಬ್ದಾರರು ಯಾರು; ಬೆಳೆ ನಾಶವಾದ ಬಗ್ಗೆ ಪರಿಹಾರ ಪಡೆಯಲು ರೈತರು ಯಾರನ್ನು ಸಂಪರ್ಕಿಸಬೇಕು;	ಗ್ರಾಮೀಣ ಪ್ರದೇಶಗಳಲ್ಲಿನ ರೈತರ ನೀರಾವರಿ ಪಂಪ್ ಸೆಟ್‌ಗಳ ಪರಿವರ್ತಕಗಳು ವಿಫಲಗೊಂಡಲ್ಲಿ, 72 ಗಂಟೆಗಳ ಒಳಗೆ ಲಭ್ಯತೆ ಮತ್ತು ಜೇಷ್ಠತೆ ಆಧಾರದ ಮೇಲೆ ಬದಲಾಯಿಸಲಾಗುತ್ತಿದೆ. ರೈತರ ಬೆಳೆಗಳಿಗೆ ವಿದ್ಯುತ್ ಪೂರೈಕೆಯಲ್ಲಿ ತೊಂದರೆಯಾಗದಂತೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:-

...2

		• ಪರಿವರ್ತಕವನ್ನು ಅಳವಡಿಸುವ ತನಕ ತಾತ್ಕಾಲಿಕವಾಗಿ ಸಮೀಪದಲ್ಲಿರುವ ಪರಿವರ್ತಕದ ತಾಂತ್ರಿಕ ಸಾಧ್ಯತೆಗನುಗುಣವಾಗಿ ಜಾಲ ಸಂಪರ್ಕ ನೀಡಿ ವಿದ್ಯುತ್ ಸರಬರಾಜು ಮಾಡಲಾಗುತ್ತದೆ. • ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ 45 ಸಂಖ್ಯೆಯ ಪರಿವರ್ತಕ ದುರಸ್ತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. • ಬೆಳಗಾವಿ ಹಾಗೂ ಹುಬ್ಬಳ್ಳಿ ನಗರಗಳಲ್ಲಿ ಹೆಚ್ಚುವರಿ ಎರಡು ದೊಡ್ಡ ಪ್ರಮಾಣದ (ಎನ್.ಜಿ.ಇ.ಎಫ್) ಪರಿವರ್ತಕ ದುರಸ್ತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಮುಖಾಂತರ ವಿಫಲವಾದ ಪರಿವರ್ತಕಗಳನ್ನು ದುರಸ್ತಿಗೊಳಿಸಿ, ರೈತರಿಗೆ ಯಾವುದೇ ರೀತಿಯಾದ ತೊಂದರೆಯಾಗದ ರೀತಿಯಲ್ಲಿ ಬದಲಾಯಿಸಲಾಗುತ್ತಿದೆ. • ಅಲ್ಲದೇ, ತಾಲ್ಲೂಕುವಾರು ಮಟ್ಟದಲ್ಲಿ ಟ್ರಾನ್ಸ್‌ಫಾರ್ಮರ್ ಬ್ಯಾಂಕ್‌ಗಳಲ್ಲಿ ಸಾಕಷ್ಟು ಸಂಖ್ಯೆಯ ಪರಿವರ್ತಕಗಳನ್ನು ದಾಸ್ತಾನು ಇಡಲಾಗಿದ್ದು, ಅವುಗಳನ್ನು ಉಪಯೋಗಿಸಿ ವಿಫಲಗೊಂಡ ಪರಿವರ್ತಕಗಳನ್ನು ಬದಲಾಯಿಸಲಾಗುತ್ತಿದೆ. ಟ್ರಾನ್ಸ್‌ಫಾರ್ಮರ್ ಬ್ಯಾಂಕಗಳಲ್ಲಿ **250** ಟ್ರಾನ್ಸ್ ಫಾರ್ಮರ್‌ಗಳನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ದಾಸ್ತಾನು ಇಟ್ಟುಕೊಂಡಿರುತ್ತವೆ.
ಈ)	ರೈತರ ಹೊಲದಲ್ಲಿ ವಿದ್ಯುತ್ ತಂತಿಗಳು ಜೋತು ಬಿದ್ದು, ಕಬ್ಬಿನ ಗದ್ದೆ ಸುಟ್ಟು ಹೋಗುತ್ತಿದ್ದರು ಮತ್ತೊಂದು ಕಂಬ ಹಾಗೂ ಅದಕ್ಕೆ ಉಪಕರಣ ಮತ್ತು ತಂತಿಯನ್ನು ಸರ್ಕಾರ ನೀಡುವುದೇ;	ಜೋತು ಬಿದ್ದ ವಿದ್ಯುತ್ ತಂತಿಗಳನ್ನು ಬಿಗಿಗೊಳಿಸಿ, ಅವಶ್ಯಕತೆ ಇರುವೆಡೆಯಲ್ಲಿ ಗೈ ಸೆಟ್‌ಗಳನ್ನು ಬಿಗಿಗೊಳಿಸುವ ಮೂಲಕ ಸರಿಪಡಿಸಲಾಗುತ್ತಿದೆ ಹಾಗೂ ಡಿ.ಡಿ.ಯು.ಜಿ.ಜೆ.ವೈ, ಐ.ಪಿ.ಡಿ.ಎಸ್ ಹಾಗೂ ಇನ್ನಿತರ ಯೋಜನೆಗಳಲ್ಲಿ ಹಳೆಯ ತಂತಿಯನ್ನು ಮತ್ತು ಶಿಥಿಲಗೊಂಡ ಕಂಬಗಳನ್ನು ಬದಲಾಯಿಸುವ ಕಾಮಗಾರಿಗಳು ಪ್ರಗತಿಯಲ್ಲಿವೆ. ಅಲ್ಲದೇ, ದಾಂಡೇಲಿ ವಿಭಾಗ ವ್ಯಾಪ್ತಿಯಲ್ಲಿ ಆನೆದಾಟು ಪ್ರದೇಶಗಳಲ್ಲಿ (Elephant Corridor) ಎಲ್ಲಾ 8 ಮೀಟರ್ ಕಂಬಗಳನ್ನು 9 ಮೀಟರ್ ಉದ್ದದ ಕಂಬಗಳಿಂದ ಬದಲಾಯಿಸಲಾಗಿರುತ್ತದೆ.
ಉ)	ಕಡಿಮೆ ವೋಲ್ಟೇಜ್‌ದಿಂದ ರೈತರ ಪಂಪ್ ಸೆಟ್ ಸುಡುತ್ತಿದ್ದು ಇದಕ್ಕೆ ಜವಾಬ್ದಾರರು ಯಾರು; ಇಲಾಖೆಯ ಅಧಿಕಾರಿಗಳು ರೈತರಿಗೆ ಸರಿಯಾಗಿ ವೋಲ್ಟೇಜ್ ಬರುತ್ತಿದೆಯೋ ಇಲ್ಲವೋ ಎಂದು ತಪಾಸಣೆ ಮಾಡುವರೇ; ಹಾಗಿದ್ದಲ್ಲಿ, ಕಳೆದ 5 ವರ್ಷಗಳಿಂದ ಕಾರವಾರ	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಯಾವುದೇ ರೀತಿಯಾದ ಕಡಿಮೆ ವೋಲ್ಟೇಜ್ ಸಮಸ್ಯೆ ಇರುವುದಿಲ್ಲ. ಪ್ರಾಕೃತಿಕ ವಿಕೋಪಗಳಿಂದ ಅಂದರೆ ಮಿಂಚು, ಗುಡುಗುಗಳಿಂದ, ಮಳೆಗಾಳಿಯಿಂದ ವಿದ್ಯುತ್ ಮಾರ್ಗಗಳ ಮೇಲೆ ಮರಗಳು ಬೀಳುವುದರಿಂದಲೂ, ರೈತರು ಐ.ಎಸ್.ಐ. ಗುಣಮಟ್ಟದ ಮೋಟಾರ್‌ಗಳನ್ನು ಹಾಗೂ ಕೆಪಾಸಿಟರ್‌ಗಳನ್ನು

<table>
<tr>
<td>-</td>
<td>ಜಿಲ್ಲೆಯ ಹಳಿಯಾಳ/ ಜೋಯಿಡಾ ತಾಲ್ಲೂಕಿನಲ್ಲಿ ಎಷ್ಟು ಟಿ.ಸಿ.ಗಳು ಹಾಳಾಗಿದ್ದು ಹಾಗೂ ಎಷ್ಟು ಟಿ.ಸಿ.ಗಳನ್ನು ಸರಿಪಡಿಸಲಾಗಿರುತ್ತದೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಎಷ್ಟು ಸ್ಥಳಗಳಲ್ಲಿ ತಪಾಸಣೆ ಮಾಡಿರುವರು; ಇದಕ್ಕೆ ತಗುಲಿದ ವೆಚ್ಚ ಎಷ್ಟು; ಸವಿಸ್ತಾರ ವರದಿ ನೀಡುವುದು;</td>
<td>ಅಳವಡಿಸದೇ ಇರುವುದರಿಂದಲೂ, ಅವೈಜ್ಞಾನಿಕವಾಗಿ ಮೋಟಾರ್‌ಗಳನ್ನು ರೀ–ವೈಂಡಿಂಗ್ ಮಾಡಿಸಿರುವುದರಿಂದಲೂ ಕೂಡ ಪರಿವರ್ತಕಗಳು / ಕೃಷಿ ಪಂಪ್ ಸೆಟ್‌ಗಳು ವಿಫಲಗೊಳ್ಳುವ ಸಾಧ್ಯತೆ ಇರುತ್ತದೆ.

ಕೆಲವು ರೈತರುಗಳು ಅನಧಿಕೃತವಾಗಿ ನೀರಾವರಿ ಪಂಪಸೆಟ್ ಗಳನ್ನು ಉಪಯೋಗಿಸುತ್ತಿರುವುದರಿಂದಲೂ, ಅಧಿಕ ಹೊರೆಯಿಂದಾಗಿ ಪರಿವರ್ತಕಗಳು ವಿಫಲವಾಗುತ್ತಿರುತ್ತವೆ.

ಅಲ್ಲದೇ, ಪರಿವರ್ತಕಗಳ ವಿಫಲತೆಯನ್ನು ಕಡಿಮೆಗೊಳಿಸಲು ಕಳೆದ 5 ವರ್ಷಗಳಲ್ಲಿ ಹಳಿಯಾಳ ಮತ್ತು ಜೋಯಿಡಾ ತಾಲ್ಲೂಕುಗಳಲ್ಲಿ ಅಧಿಕ ಒತ್ತಡ ಇರುವ ಪರಿವರ್ತಕಗಳನ್ನು ಪರಿಶೀಲಿಸಿ, ಅವಶ್ಯಕತೆ ಇರುವಲ್ಲಿ ಹೆಚ್ಚುವರಿ ಪರಿವರ್ತಕಗಳನ್ನು ಮತ್ತು ಹೆಚ್ಚಿನ ಸಾಮರ್ಥ್ಯವಿರುವ ಒಟ್ಟು 1,203 ಸಂಖ್ಯೆಯ ಪರಿವರ್ತಕಗಳನ್ನು ಅಳವಡಿಸಲಾಗಿದೆ.

ಕಳೆದ 5 ವರ್ಷಗಳಿಂದ ಕಾರವಾರ ಜಿಲ್ಲೆಯ ಹಳಿಯಾಳ ಮತ್ತು ಜೋಯಿಡಾ ತಾಲ್ಲೂಕುಗಳಲ್ಲಿ ವಿಫಲವಾಗಿರುವ ಪರಿವರ್ತಕಗಳ ಸ್ಥಳ ಪರಿಶೀಲಿಸಿ 1,013 ಸಂಖ್ಯೆಯ ಪರಿವರ್ತಕಗಳನ್ನು ಬದಲಾಯಿಸಲಾಗಿರುತ್ತದೆ. ವಿವರಗಳು ಕೆಳಕಂಡಂತಿವೆ:–

<table>
<tr><th>ವರ್ಷ</th><th>ತಪಾಸಣೆ ಗೊಂಡ ಸ್ಥಳಗಳ ಸಂಖ್ಯೆ</th><th>ವಿಫಲವಾದ ಪರಿವರ್ತಕಗಳ ಸಂಖ್ಯೆ</th><th>ಬದಲಾಯಿಸಿದ ಪರಿವರ್ತಕಗಳ ಸಂಖ್ಯೆ</th><th>ತಗುಲಿದ ವೆಚ್ಚ ಕೋಟಿ (ರೂ. ಗಳಲ್ಲಿ)</th></tr>
<tr><td>2015–16</td><td>188</td><td>188</td><td>188</td><td>0.28</td></tr>
<tr><td>2016–17</td><td>208</td><td>208</td><td>208</td><td>0.3</td></tr>
<tr><td>2017–18</td><td>212</td><td>212</td><td>212</td><td>0.31</td></tr>
<tr><td>2018–19</td><td>221</td><td>221</td><td>221</td><td>0.33</td></tr>
<tr><td>2019–20 (ಜನವರಿ–2020ರ ಅಂತ್ಯದವರೆಗೆ)</td><td>184</td><td>184</td><td>184</td><td>0.38</td></tr>
<tr><td>ಒಟ್ಟು</td><td>1013</td><td>1013</td><td>1013</td><td>1.60</td></tr>
</table>
</td>
</tr>
</table>

<table>
<tr>
<td>ಊ)</td>
<td>ಹೊಸದಾಗಿ (ಹತ್ತು ಹೆಚ್.ಪಿ. ಒಳಗೆ) ವಿದ್ಯುತ್ ಬೇಕಾದಲ್ಲಿ ಯಾರಿಗೆ ಅರ್ಜಿಯನ್ನು ಸಲ್ಲಿಸಬೇಕು; ಇದಕ್ಕಾಗಿ ಯಾವ ಕ್ರಮಗಳನ್ನು ಅನುಸರಿಸಬೇಕು;</td>
<td>ಹೊಸದಾಗಿ ನೀರಾವರಿ ಪಂಪಸೆಟ್ ಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸಂಬಂಧಪಟ್ಟ ಉಪ–ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರಿಗೆ ನಿಗದಿತ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ.</td>
</tr>
<tr>
<td>ಋ)</td>
<td>ಕಳೆದ 5 ವರ್ಷಗಳಲ್ಲಿ ವಿದ್ಯುತ್ ಕಂಬ ಹಾಗೂ ವಿದ್ಯುತ್ ತಂತಿಯನ್ನು ಹಳಿಯಾಳ/ ಜೊಯಿಡಾ ತಾಲ್ಲೂಕಿನಲ್ಲಿ ಸರಬರಾಜು ಮಾಡಿರುವ ವಿವರಗಳನ್ನು ನೀಡುವುದು ಹಾಗೂ ಇದರ ಖರೀದಿಗೆ ಇರುವ ಮಾನದಂಡಗಳೇನು; ಬಂದಿರುವ ವಿದ್ಯುತ್ ಕಂಬ ಹಾಗೂ ತಂತಿ ಅಳವಡಿಸಿರುವ ಮಾರ್ಗಗಳ ಸಂಪೂರ್ಣ ವಿವರ ನೀಡುವುದು?</td>
<td>ಕಳೆದ 5 ವರ್ಷಗಳಲ್ಲಿ ಹಳಿಯಾಳ ಮತ್ತು ಜೋಯಿಡಾ ತಾಲ್ಲೂಕುಗಳಲ್ಲಿ ವಿವಿದ ಕಾಮಗಾರಿಗಳಡಿಯಲ್ಲಿ ಅಂದರೆ ಒಂದು ಬಾರಿ ನಿರ್ವಹಣೆ (OTM), Preventive Measures to reduced accidents, (PMRI) ಮತ್ತು ಮಳೆ ಮತ್ತು ಗಾಳಿಯಿಂದ ಉಂಟಾದ ಹಾನಿಗಳಿಂದ ಕೆಳಕಂಡಂತೆ ವಿದ್ಯುತ್ ಕಂಬ ಮತ್ತು ವಿದ್ಯುತ್ ತಂತಿಗಳನ್ನು ಬದಲಾಯಿಸಲಾಗಿದೆ.
<table>
<tr><td>1</td><td>2015–16</td><td>2,155</td><td>381.05</td></tr>
<tr><td>2</td><td>2016–17</td><td>1,871</td><td>225.54</td></tr>
<tr><td>3</td><td>2017–18</td><td>2,569</td><td>357.21</td></tr>
<tr><td>4</td><td>2018–19</td><td>2,451</td><td>415.06</td></tr>
<tr><td>5</td><td>2019–20</td><td>2,763</td><td>472.30</td></tr>
<tr><td colspan="2">ಒಟ್ಟು</td><td>11,809</td><td>1,851.16</td></tr>
</table>
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ ವಿದ್ಯುತ್ ಕಂಬ ಮತ್ತು ವಿದ್ಯುತ್ ತಂತಿಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ ಪ್ರಕಾರ ಖರೀದಿಸಲಾಗುತ್ತಿದೆ.</td>
</tr>
</table>

ಸಂಖ್ಯೆ: ಎನರ್ಜಿ 51 ಇಬಿಎಸ್ 2020

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ